ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು

ಸಾಕ್ಷಿಯ ಹೆಸರು :- ಶಿವಕುಮಾರ್

ತಂದೆ/ಗಂಡನ ಹೆಸರು :- ಮಲ್ಲಯ್ಯ

ವಯಸ್ಸು :- 47 ವರ್ಷ

ಉದ್ಯೋಗ :- ಪಿಐ, ರಾಜ್ಯ ಗುಪ್ತ ವಾಹಿನಿ

ವಾಸಸ್ಥಳ :- ಬೆಂಗಳೂರು

(ಸಾಕ್ಷಿಗೆ ದಿನಾಂಕಃ 17-03-2026 ರಂದು ಪ್ರಮಾಣ ವಚನ ಬೋಧಿಸಲಾಯಿತು)

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

ನಾನು ಅಕ್ಟೋಬರ್ 2023 ರಿಂದ ಸೆಪ್ಟೆಂಬರ್ 2025 ರವರೆಗೆ ಮದ್ದೂರು ಪೋಲೀಸ್ ಠಾಣೆಯಲ್ಲಿ ಪಿಐ ಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿ 17-12-2023 ರಂದು ಈ ಕೇಸಿನ ಕಡತವನ್ನು ಚಾಸಾ-18 ರವರಿಂದ ಪಡೆದುಕೊಂಡು ಪರಿಶೀಲಿಸಿರುತ್ತೇನೆ. ನಂತರ ಅದೇದಿನ ವಾಹನದ ಮಾಲೀಕರಿಗೆ ನಿಪಿ-19 ರಂತೆ ನೋಟೀಸ್ ನೀಡಿದ್ದೆನೆ. ಸಾಕ್ಷಿಯ ಸಹಿಯನ್ನು ನಿಪಿ-19 ಎ ಎಂದು ಗುರುತಿಸಲಾಯಿತು. ದಿ 18-12-2023 ರಂದು ವಾಹನದ ಮಾಲೀಕರಿಂದ ನಿಪಿ-20 ರಂತೆ ಉತ್ತರ ಪಡೆದು, ನಿಪಿ-22 ರಂತೆ ಬಾಂಡ್ ಪಡೆದು ವಾಹನ ಬಿಡುಗಡೆ ಮಾಡಿದ್ದೆನೆ. ಸಾಕ್ಷಿಯ ಸಹಿಯನ್ನು ನಿಪಿ-20 ಎ ಮತ್ತು ನಿಪಿ-22 ಎ ಎಂದು ಗುರುತಿಸಲಾಯಿತು. ದಿ 20-12-2023 ರಂದು ನಿಪಿ-16 ಪಿಎಂ ವರದಿ ಮತ್ತು ನಿಪಿ-21 ರಂತೆ ಐಎಂವಿ ವರದಿಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯ ಸಹಿ ನಿಪಿ-16 ಎ, ನಿಪಿ-21 ಎ ಎಂದು ಗುರುತಿಸಲಾಯಿತು. ದಿ 07-02-2024 ರಂದು ಆರೋಪಿತರ ವಿರುದ್ಧ ಆರೋಪ ಸಾಬೀತಾದ ಕಾರಣ ಅವರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರೇ ಅಪಘಾತ ಮಾಡಿದ ವ್ಯಕ್ತಿಗಳಾಗಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವಕೀಲರಿಂದಃ**

ನಾನು ಚಾಸಾ-1 ರವರಿಗೆ ಸಹಾಯವಾಗಲಿ ಎಂದು ಅವರ ಜೊತೆ ಶಾಮೀಲಾಗಿ ಸುಳ್ಳು ದಾಖಲೆ ಸೃಷ್ಟಿ ಮಾಡಿ, ಸುಳ್ಳು ದೋಷಾರೋಪಣಾ ಸಲ್ಲಿಸಿ, ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**. (ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ